## ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾ.ದಃ ನ್ಯಾಯಾಲಯಃ ಶೃಂಗೇರಿ

## ಸಿ.ಸಿ ಸಂಖ್ಯೆ:: 5/2023

**ಸಾಕ್ಷಿದಾರರ ಹೆಸರು :: ಪ್ರಸನ್ನ**

**ಸಿ.ಡಬ್ಲ್ಯೂ - 01**

**ತಂದೆಯ ಹೆಸರು :: ಲೇಟ್ ವೆಂಕಟರಮಣಯ್ಯ**

**ಪಿ.ಡಬ್ಲ್ಯೂ -01**

**ವಯಸ್ಸು :: 56 ವರ್ಷ**

**ಉದ್ಯೋಗ :: ಮುಖ್ಯ ಪೇದೆ, ಶೃಂಗೇರಿ ಪೋಲೀಸ್ ಠಾಣೆ,**

**ವಾಸಸ್ಥಳ :: ಶೃಂಗೇರಿ.**

**ದಿನಾಂಕಃ 28-11-24 ರಂದು ಪ್ರಮಾಣವಚನ ಬೋಧಿಸಲಾಯಿತು.**

**:: ಮುಖ್ಯ ವಿಚಾರಣೆ :: ಮಾನ್ಯ ಎಪಿಪಿಯವರಿಂದ ::**

ನಾನು ಕಳೆದ ಒಂದು ವರ್ಷದಿಂದ ಶೃಂಗೇರಿ ಪೊಲೀಸ್ ಠಾಣೆಯಲ್ಲಿ ಮುಖ್ಯಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

2. ದಿನಾಂಕಃ10-08-2024 ರಂದು ಈ ಪ್ರಕರಣದ ಆರೋಪಿಯಾದ ಅವಿನಾಶ್ ಬಿನ್ ಜಗದೀಶ್ , 38 ವರ್ಷ, ರಾಜಾನಗರ, ಶೃಂಗೇರಿ ಪ್ರೊಕ್ಲಮೇಶನ್ ನ್ನು ಜಾರಿ ಮಾಡಲು ನನ್ನನ್ನು ನೇಮಕ ಮಾಡಿದ್ದು, ಈ ಸಂಬಂಧ ನಾನು ಸದರಿ ಗ್ರಾಮಕ್ಕೆ ಹೋಗಿದ್ದು, ಪಂಚರಾದ ಕೃಷ್ಣಮೂರ್ತಿ ಮತ್ತು ಐಶ್ವರ್ಯ ರವರಿಗೆ ಈ ಪ್ರಕರಣದ ವಿಚಾರ ತಿಳಿಸಿ ಮತ್ತು ಸದರಿ ಪ್ರಕರಣದಲ್ಲಿ ತಲೆಮರೆಸಿಕೊಂಡ ಅವಿನಾಶ್ ರವರು ಈವರೆಗೂ ಪೊಲೀಸರಿಗೆ ಸಿಕ್ಕಿರುವುದಿಲ್ಲ ಮತ್ತು ನ್ಯಾಯಾಲಯಕ್ಕೆ ಹಾಜರಾಗಿರುವುದಿಲ್ಲ. ಆದ ಕಾರಣ ಅವರು ಊರಿಗೆ ಬಂದರೆ ಪೊಲೀಸ್ ಠಾಣೆಗಾಗಲೀ ಅಥವಾ ನ್ಯಾಯಾಲಯಕ್ಕಾಗಲೀ ಹಾಜರಾಗುವಂತೆ ತಿಳಿಸಿ ನಮ್ಮ ಮೈಕ್ ನಿಂದ ಪ್ರಚಾರ ಮಾಡಿ ಸುತ್ತೋಲೆ ಹೊರಡಿಸಿರುತ್ತೇವೆ. ಪ್ರೊಕ್ಲಮೇಶನ್ ನ ಪ್ರತಿಯನ್ನು ಆರೋಪಿ ವಾಸವಿದ್ದ ಮನೆಯ ಎದುರುಗಡೆ ಗೋಡೆಗೆ ಪಂಚರಾದ ಕೃಷ್ಣಮೂರ್ತಿ ಮತ್ತು ಐಶ್ವರ್ಯ ರವರ ಸಮಕ್ಷಮ ಅಂಟಿಸಿರುತ್ತೇನೆ, ಇನ್ನೊಂದು

ಪ್ರತಿಯನ್ನು ಗ್ರಾಮ ಪಂಚಾಯ್ತಿ ಗೋಡೆಗೆ ಅಂಟಿಸಿರುತ್ತೇನೆ ಮತ್ತು ಸದರಿ ಸಮಯದಲ್ಲಿ ಪೋಟೋಗಳನ್ನು ತೆಗೆದಿರುತ್ತೇನೆ. ಸಾಕ್ಷಿಯು ಪ್ರೊಕ್ಲಮೇಶನ್ ನ್ನು ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ-1 ಎಂದು, ಮಹಜರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಮಹಜರನ್ನು ಸಂಜೆ 4.30 ರಿಂದ 5.30 ಗಂಟೆಯವರೆಗೆ ಬರೆದಿರುತ್ತೇನೆ. 1 ಪೋಟೋವನ್ನು ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ-3 ಎಂದು ಗುರುತಿಸಲಾಯಿತು. ಸದರಿ ಆರೋಪಿಗೆ ಸಂಬಂಧಿಸಿ ಯಾವುದೇ ಆಸ್ತಿ ಇರುವುದಿಲ್ಲ. ಸದರಿ ಆರೋಪಿಗೆ ಸಂಬಂಧಿಸಿದ ಆಸ್ತಿ ಬಗ್ಗೆ ತಹಶೀಲ್ದಾರ್ ರವರಿಗೆ ಮನವಿ ನೀಡಿರುತ್ತೇನೆ. ಸಾಕ್ಷಿಯು ಮನವಿ ಮತ್ತು ವರದಿಯನ್ನುನೋಡಿ ಗುರುತಿಸಿದ್ದು, ನಿಪಿ -4 ಮತ್ತು ನಿಪಿ -5 ಎಂದು ಗುರುತಿಸಲಾಯಿತು.

**:: ಮರುವಿಚಾರಣೆ ಇಲ್ಲ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಸಹಿ/-

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,

ಶೃಂಗೇರಿ.